## 1ನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ

**ಸಿ.ಸಿ ಸಂಖ್ಯೆಃ 390-2018**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಗಂಗೊಳ್ಳಿ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿ ಃ ಅಜೋಮನ್ ವರ್ಗೀಸ್

**<u>ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?
ಉತ್ತರಃ

ಪ್ರಶ್ನೆಃ 2. ಪ್ರಾಸಾ 4: ನಾಗರಾಜ ಕುಲಾಲ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 09-12-2017 ರಂದು ಹಗಲು ಠಾಣಾ ಪ್ರಭಾರದಲ್ಲಿರುವಾಗ ಚಾ.ಸಾ.1ರವರು ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಆಧಾರದ ಮೇಲೆ ಠಾಣಾ ಅಪರಾಧ ಸಂಖ್ಯೆ 162/2017 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿ ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿದ್ದು. ನಂತರ ಮುಂದಿನ ಕಡತವನ್ನು ಚಾ.ಸಾ.14 ರವರಿಗೆ ಹಸ್ತಾಂತರಿಸಿದ್ದು. ನಿ.ಪಿ.1 ರಲ್ಲಿ ತನ್ನ ಸಹಿಯನ್ನು ನಿ.ಪಿ.1(ಬಿ) ಎಂದು, ಪ್ರ.ವ.ವರದಿಯನ್ನು ನಿ.ಪಿ.10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 3. ಪ್ರಾಸಾ 5: ಶ್ರೀ ವಿನಾಯಕ ಬಿಲ್ಲವ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 10-12-2017 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು. ಇದೊಂದು ಘೋರ ಅಪರಾಧವಾದ ಕಾರಣ ಚಾ.ಸಾ.19 ರವರು ನಡೆಸಬೇಕಾಗಿದ್ದು, ಅವರು ಹೊನ್ನಾವರ ಬಂದೊಬಸ್ತುವಿನಲ್ಲಿ ಇದ್ದ ಕಾರಣ ಅವರು ಮೌಖಿಕವಾಗಿ ಆದೇಶಿಸಿದ್ದು, ತಾನು ಅಪಘಾತ ಸ್ಥಳಕ್ಕೆ ಭೇಟಿ ಮಾಡಿ ಪಂಚರನ್ನು ಬರಮಾಡಿಕೊಂಡು ಚಾ.ಸಾ.2 ರವರು ತೋರಿಸಿದ ಸ್ಥಳದಲ್ಲಿ ಚಾ.ಸಾ.1 ಮತ್ತು 3ರವರ ಸಮಕ್ಷಮ ಪಂಚನಾಮೆಯನ್ನು ಬೆಳಗ್ಗೆ 9.00 ರಿಂದ 9.45 ರವರೆಗೂ ಜರುಗಿಸಿ ನಕ್ಷೆಯನ್ನು ತಯಾರಿಸಿ ಪೋಟೋ ತೆಗೆದಿದ್ದು. ಸ್ಥಳದಲ್ಲಿ ಚಾ.ಸಾ.2 ಮತ್ತು 3 ರವರ ಹೇಳಿಕೆ ಪಡೆದಿದ್ದು. ನಂತರ ಅಪಘಾತಕ್ಕೆ ಒಳಗಾದ ಸೈಕಲು ಮತ್ತು ಲಾರಿಯನ್ನು ವಶಕ್ಕೆ ಪಡೆದು ಠಾಣೆಗೆ ತಂದು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿದ್ದು. ನಂತರ ಕಡತವನ್ನು ಸಿ ಪಿ ಐ ರವರಿಗೆ ಹಸ್ತಾಂತರಿಸಿರುತ್ತೇನೆ. ನಿಪಿ-2 ಮತ್ತು 3 ರಲ್ಲಿ ತನ್ನ ಸಹಿಗಳನ್ನು ನಿ.ಪಿ.2(ಡಿ) ಮತ್ತು ನಿ.ಪಿ.3(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ.5 ನ್ನು ನೋಡಿ ಗುರುತಿಸಿರುತ್ತಾರೆ. ಸೈಕಲು ಮತ್ತು ಲಾರಿಯ 2 ಪೋಟೊಗಳನ್ನು ನಿ.ಪಿ.11 ಮತ್ತು 12 ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 4. ಪ್ರಾಸಾ 6: ಪರಮೇಶ್ವರ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 12-12-2017 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.14ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಅಪಘಾತಕ್ಕೆ ಸಂಬಂಧಿಸಿದ ಲಾರಿ ಸಂಖ್ಯೆ ಕೆಎ-05-ಎಎಂ-9795ರ ಆರ್ ಸಿ ಮಾಲೀಕರಾದ ಚಾ.ಸಾ.9 ರವರು ಕಚೇರಿಗೆ ಹಾಜರಾಗಿ ಕಲಂ 133ರಡಿಯಲ್ಲಿ ನೊಟೀಸು ನೀಡಿ ಉತ್ತರವನ್ನು ಪಡೆದಿದ್ದು. ಅಪಘಾತದ ಸಮಯದಲ್ಲಿ ಲಾರಿಯನ್ನು ಆರೋಪಿ ಚಲಾಯಿಸುತ್ತಿದ್ದ ಬಗ್ಗೆ ಹೇಳಿಕೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?
ಉತ್ತರಃ

ಪ್ರಶ್ನೆಃ 5. ಪ್ರಾಸಾ 6: ಪರಮೇಶ್ವರ ರವರು ಮುಂದುವರೆದು ವಾಹನದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಿ

ಅದರ ಪ್ರತಿಗಳನ್ನು ಕಡತಕ್ಕೆ ಅಳವಡಿಸಿದ್ದು. ಅಪಘಾತಪಡಿಸಿದ ಲಾರಿಯನ್ನು ಬಿಡುಗಡೆ ಮಾಡಲು ನ್ಯಾಯಾಲಯದಿಂದ ಆದೇಶ ಬಂದಿದ್ದು, ಆರ್ ಸಿ ಮಾಲೀಕರಿಗೆ ಇಂಡಿಮಿನಿಟಿ ಬಾಂಡ್ ಮೂಲಕ ವಾಹನವನ್ನು ಬಿಡುಗಡೆ ಮಾಡಿ ಸ್ವೀಕೃತಿ ಪಡೆದಿರುತ್ತೇನೆ. ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡ ಬಗ್ಗೆ ಮಾಹಿತಿ ಬಂದಿರುತ್ತದೆ. ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 6. ಪ್ರಾಸಾ 6: ಪರಮೇಶ್ವರ ರವರು ಮುಂದುವರೆದು ದಿಃ 30-12-2017 ರಂದು ಈ ಪ್ರಕರಣದಲ್ಲಿ ಮೃತ ಆನಂದ ಹೆಬ್ಬಾರ್ ರವರ ಶವಪರೀಕ್ಷಾ ವರದಿಯನ್ನು ಕೆಎಂಸಿ ಆಸ್ಪತ್ರೆಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಅಪಘಾತಕ್ಕೆ ಒಳಗೊಂಡ ವಾಹನಗಳ ಐಎಂವಿ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಈವರೆಗಿನ ತನಿಖೆಯಿಂದ ಆರೋಪಿಯ ವಿರುದ್ದ ಸಾಕ್ಷ್ಯಧಾರಗಳು ಲಭ್ಯವಾಗಿದ್ದರಿಂದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನ. ಕಲಂ 133ರ ತಿಳುವಳಿಕೆ, ಉತ್ತರ ಮತ್ತು ಸ್ವೀಕೃತಿಗಳನ್ನು ನಿ.ಪಿ. 13 ರಿಂದ 15 ಎಂದು, ಸಾಕ್ಷಿ ಸಹಿಗಳನ್ನು ನಿ.ಪಿ.13(ಎ) ರಿಂದ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ.8 ಮತ್ತು 9ನ್ನು ನೋಡಿ ಗುರುತಿಸಿದ್ದು. ಸಾಕ್ಷಿ ನಿ.ಪಿ.11 ಮತ್ತು 12 ರಲ್ಲಿ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 7. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 8: ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ಇಂದು ದಿನಾಂಕ 3 ನೇ ಡಿಸೆಂಬರ್ 2025.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.